O.S. No.341/2023
DW.3

ಇಂದು ದಿನಾಂಕ: 04-08-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲು:** ವಾದಿ ಪರ **ವಕೀಲರಿಂದ :-**

ನನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನಿಜವಾಗಿರುತ್ತವೆ. ನನ್ನ ಪ್ರಮಾಣ ಪತ್ರದ ಪ್ಯಾರಾ 3 ರಲ್ಲಿ ಪ್ರತಿವಾದಿಯಾದ ನನ್ನ ತಂದೆ ವಾದಿಗೆ ದಾವಾ ಸ್ವತ್ತನ್ನು ಕ್ರಯದ ಕರಾರು ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದು ಬರೆದಿರುತ್ತದೆ ಎಂದರೆ ಸರಿ. ಸದರಿ ಕ್ರಯದ ಕರಾರು ಪತ್ರಕ್ಕೆ ನನ್ನ ಸಹೋದರ ಶಾಂತನಗೌಡ ಕೂಡ ಸಹಿ ಮಾಡಿರುತ್ತಾನೆ ಎಂದರೆ ಸರಿ. ನಿಡಿ-3 ರಲ್ಲಿ ದಿ:30-01-2020 ರಂದು ಮಾನಸ ಆಗ್ರೋ ರವರಿಗೆ ರೂ.1,47,000/- ಜಮಾ ಆಗಿರುವ ಬಗ್ಗೆ ಇದ್ದು ಅದು ವಾದಿಯ ಖಾತೆ ಅಲ್ಲ ಎಂದರೆ ಸರಿ. ಪ್ರತಿವಾದಿಯಾದ ನನ್ನ ತಂದೆ ದಾವಾ ಸ್ವತ್ತುಗಳನ್ನು 33 ಲಕ್ಷ ರೂಪಾಯಿಗೆ ಮಾರಾಟ ಮಾಡಲು ಒಪ್ಪಿ 32 ಲಕ್ಷ ರೂಪಾಯಿ ಮುಂಗಡ ಹಣ ತೆಗೆದುಕೊಂಡು ವಾದಿಯ ಹೆಸರಿಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಬಜ್ಜಣ್ಣ ಮತ್ತು ಗುರುನಾಥ ಎನ್ನುವವರು ವಾದಿಯ ಹೆಸರಿಗೆ ಮಾಡಿಕೊಡಲು ಹೇಳಿದ್ದರಿಂದ ಆ ರೀತಿ ಮಾಡಿಕೊಟ್ಟಿರುತ್ತೇವೆ ಎಂದು ಸ್ವತ: ನುಡಿದಿರುತ್ತಾರೆ. ನನ್ನ ತಂದೆ ಮತ್ತು ವಾದಿಯ ನಡುವಿನ ಸದರಿ ಕ್ರಯದ ಕರಾರಿನ ವ್ಯವಹಾರಕ್ಕೂ ಮತ್ತು ನಾನು ಹೇಳುತ್ತಿರುವ ಬಜ್ಜಣ ಮತ್ತು ಗುರುನಾಥರವರಿಗೆ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ನನ್ನ ಪ್ರಮಾಣ ಪತ್ರದಲ್ಲಿ ಕೇಳುತ್ತಿರುವ ಮೊಬೈಲ್ ರೆಕಾರ್ಡಿಂಗ್ ಈ ಪ್ರಕರಣಕ್ಕೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ಉಳಿದ ಎಲ್ಲಾ ವಿಚಾರಗಳು ಸುಳ್ಳಾಗಿದ್ದು, ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾನವಿ.